**ಸಾಕ್ಷಿಗೆ ದಿನಾಂಕ 01-02-2025ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ RTK ವಕೀಲರಿಂದ</u>**

ನಾನು ಕುರಳಗೇರಾ ಗ್ರಾಮದವನು. ಸರಕಾರದವರು ಕುರಳಗೇರಾ ಗ್ರಾಮದಲ್ಲಿ ನನಗೆ ಸೇರಿದ ಸ.ನಂ.71ರಲ್ಲಿ 27 ಗುಂಟೆ ಜಮೀನನನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ 34 ಗುಂಟೆ ಜಮೀನು ಸ್ವಾ ಧೀಪಡಿಸಿಕೊಂಡಿರುತ್ತಾರೆಂದು ಬರೆಸಿರುತ್ತೇವೆಂದರೆ ನಿಜ. ವಿಶೇಷ ಭೂ-ಸ್ವಾಧೀನಾಧಿಕಾರಿಗಳು ಸ್ವಾಧೀನಪಡಿಸಿಕೊಂಡ ಜಮೀನಿಗೆ ಸೂಕ್ತ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ವಿಶೇಷ ಭೂ-ಸ್ವಾಧೀನಾಧಿಕಾರಿಗಳು ನನ್ನ ಜಮೀನಿಗೆ ಬಂದಾಗ ನಾನು ಊರಿನಲ್ಲಿರಲಿಲ್ಲ ಎಂದರೆ ಸರಿಯಲ್ಲ. ಕುರಳಗೇರಾ ಗ್ರಾಮ ಸ.ನಂ.71ರ ಜಮೀನಿಗೆ ಸಂಬಂಧಿಸಿದಂತೆ ಸಾಕಷ್ಟು ಜಮೀನು ಸ್ವಾ ಧೀನವಾದ ಕಾರಣ ವಿಶೇಷ ಭೂ-ಸ್ವಾಧೀನಾಧಿಕಾರಿಗಳು ನೀಡಿದ ಐತೀರ್ಪನ್ನು ಪ್ರಶ್ನಿಸಿ ಸಂಬಂಧಪಟ್ಟ ಜಮೀನಿನ ಮಾಲೀಕರು ನ್ಯಾಯಾಲಯದಲ್ಲಿ ಅರ್ಜಿ ಹಾಗೂ ಮೇಲ್ಮನವಿ ಸಲ್ಲಿಸಿರುತ್ತಾರೆ ಸದರಿ ವಿಷಯ ನಿಮಗೆ ಗೊತ್ತಿಲ್ಲವೆ ಎಂದರೆ ನನಗೆ ಗೊತ್ತಿಲ್ಲ.

ನಾವು ವಿಶೇಷ ಭೂ-ಸ್ವಾಧೀನಾಧಿಕಾರಿಗಳ ಮುಂದೆ ಕಾಲಮಿತಿಯಲ್ಲಿ Protest memo ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನ್ನ ಜಮೀನನ್ನು ಅಧಿಕಾರಿಗಳು ಸರ್ವೆ ಮಾಡಿದ ನಂತರ ಗೊತ್ತಾಗಿ ಅರ್ಜಿ ಸಲ್ಲಿಸಿರುವುದಾಗಿ ನುಡಿಯುತ್ತಾರೆ. ವಿಶೇಷ ಭೂ-ಸ್ವಾಧೀನಾಧಿಕಾರಿಗಳು ಯೋಗ್ಯ ಪರಿಹಾರ ಧನ ನೀಡಿದ್ದರೂ ಸಹ ಯೋಗ್ಯ ಪರಿಹಾರ ನೀಡಿಲ್ಲ ಎಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>2ನೇ ಎದುರುದಾರರ ಪರ ವಕೀಲರು ಗೈರುಹಾಜರಾದ ಕಾರಣ ಪಾಟೀಸವಾಲಿಗೆ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,ಜೇವರ್ಗಿ